# IN THE COURT OF THE ADDL. SENIOR CIVIL JUDGE & JMFC., GUBBI

# **OS – 126/2022**

Witness present and duly sworn on : 31.07.2025.

Cross Examination: by Counsel for Defendant No.1 to 3 :

ಈ ದಾವೆಯ ವಾದಿಗಳು ಮತ್ತು ಪ್ರತಿವಾದಿಗಳನ್ನು ನಾನು ಕಳೆದ 35 ವರ್ಷಗಳಿಂದ ನೋಡಿದ್ದೇನೆ. ವಾದಿಗಳು ವಡ್ಡರಹಟ್ಟಿ ಊರಿನ ನಿವಾಸಿಗಳು. ನಾನು ವ್ಯವಸಾಯ ಮಾಡುತ್ತೇನೆ. ನನ್ನ ಸ್ವಂತ ಜಮೀನು ಸರ್ವೆ ನಂ.64/21 ತುಮಕೂರು ಗ್ರಾಮಾಂತರದಲ್ಲಿ ಇದೆ. ನನ್ನ ಹೆಸರು ನಾಗರಾಜು ಎಂದು ತೋರಿಸಲು ನಾನು ನ್ಯಾಯಾಲಯದಲ್ಲಿ ದಾಖಲೆಯನ್ನು ಕೊಟ್ಟಿದ್ದೇನೆ. ನನ್ನ ಆಧಾರ್ ಕಾರ್ಡ ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ವಾದಿಗಳ ಪರವಾಗಿ ಸಾಕ್ಷಿ ಹೇಳುತ್ತಿದ್ದೇನೆ. ವಾದಿಗಳು ನನ್ನ ಸಂಭಂದಿಕರಲ್ಲ. ನಾನು ಮತ್ತು ಅವರು ಒಂದೇ ಗ್ರಾಮದವರು. ಪ್ರತಿವಾದಿಗಳು ವಡ್ಡರಹಟ್ಟಿ ನಿವಾಸಿಗಳು. ಪ್ರತಿವಾದಿಗಳ ಕುಟುಂಬದ ಕಾರ್ಯಗಳಲ್ಲಿ ನಾನು ಗ್ರಾಮಸ್ಥನಾಗಿ ಭಾಗವಹಿಸಿದ್ದೇನೆ. ನನಗೆ ಪ್ರತಿವಾದಿಗಳ ಪರಿಚಯ ಇದೆ. ಪ್ರತಿವಾದಿಗಳ ಕುಟುಂಬದ ವಿಭಾಗದಲ್ಲಿ ನಾನು ಸಾಕ್ಷಿಯಾಗಿ ಸಹಿ ಮಾಡಿಲ್ಲ.. ಈಗ 1 ನೇ ಪ್ರತಿವಾದಿ ನರಸಮ್ಮ ವಡ್ಡರಹಟ್ಟಿ ಗ್ರಾಮದಲ್ಲಿ ಇದ್ದಾರೆ. 2 ನೇ ಪ್ರತಿವಾದಿ ಶಿವಣ್ಣ ರವರು ತೆಂಗಿನ ಮರ ಪಾಳ್ಯದಲ್ಲಿ ವಾಸ ಇದ್ದಾರೆ. ರಾಜಣ್ಣ ರವರು ವಡ್ಡರಹಟ್ಟಿಯಲ್ಲಿ ವಾಸ ಇದ್ದಾರೆ. 4 ನೇ ಪ್ರತಿವಾದಿ ಲಕ್ಷ್ಮಿದೇವಮ್ಮ ನವರು ವಡ್ಡರಹಟ್ಟಿಯಲ್ಲಿ ವಾಸ ಇದ್ದಾರೆ. ಪ್ರತಿವಾದಿಗಳಿಗೆ ಆಸ್ತಿಯು ಹೇಗೆ ಬಂದಿದೆ ಎಂಬ ಮಾಹಿತಿ ಇದೆಯಾ ಎಂದರೆ ಆಸ್ತಿಗಳ ಬಗ್ಗೆ ಗೊತ್ತಿಲ್ಲ.

1 ನೇ ಪ್ರತಿವಾದಿ ನರಸಮ್ಮ ರವರ ಗಂಡನ ಹೆಸರು ಚನ್ನಪ್ಪ. ಸದರಿ ಚನ್ನಪ್ಪ ರವರಿಗೆ ಇಬ್ಬರು ಹೆಂಡತಿಯರು. ಅವರ ಹೆಸರು ನನಗೆ ಗೊತ್ತಿಲ್ಲ. ಚನ್ನಪ್ಪನವರ ಅಣ್ಣ ತಮ್ಮಂದಿರ ಬಗ್ಗೆ ನನಗೆ ಗೊತ್ತಿಲ್ಲ. ನಾನು ಇರುವ ಊರು ಮತ್ತು 2 ನೇ ಪ್ರತಿವಾದಿ ಶಿವಣ್ಣ ರವರ ಊರಿಗೆ ಸುಮಾರು 30 ಕಿ.ಮೀ ಅಂತರ ಇದೆ. ನಾನು ಇರುವ ಊರು ಮತ್ತು 1 ನೇ ಪ್ರತಿವಾದಿ ನರಸಮ್ಮ ರವರ ಊರಿಗೆ ಸುಮಾರು 30 ಕಿ.ಮೀ ಅಂತರ ಇದೆ. 1 ನೇ ಪ್ರತಿವಾದಿಯ ಒಟ್ಟು

ಕುಟುಂಬದಲ್ಲಿ ಎಷ್ಟು ಅಣ್ಣ ತಮ್ಮಂದಿರ ನಡುವೆ ವಿಭಾಗ ಪತ್ರ ಆಗಿರುವ ವಿಚಾರ ಗೊತ್ತಿದೀಯಾ ಎಂದರೆ ಗೊತ್ತಿರುವುದಿಲ್ಲ. ವಾದಿಗಳು ಎಷ್ಟು ಆಸ್ತಿಗಳ ಮೇಲೆ ದಾವೆ ಹೂಡಿದ್ದಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ. ಚನ್ನಪ್ಪ ರವರಿಗೆ ಇಬ್ಬರು ಹೆಂಡತಿಯರಿಂದ ಎಷ್ಟು ಜನ ಮಕ್ಕಳು ಎಂದರೆ ಹಿರೆ ಹೆಂಡತಿಯಿಂದ ಒಬ್ಬ ಮಗ ಹೆಸರು ನನಗೆ ಗೊತ್ತಿಲ್ಲ. 2 ನೇ ಹೆಂಡತಿ ರವರಿಂದ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು. ಅವರುಗಳು ಶಿವಣ್ಣ, ರಾಜಣ್ಣ ಮತ್ತು ಗಂಗಲಕ್ಷ್ಮಮ್ಮ. 1 ನೇ ಪ್ರತಿವಾದಿ ನರಸಮ್ಮ ರವರು ಚನ್ನಪ್ಪನವರ ಮೊದಲನೆ ಹೆಂಡತಿ.

2 ನೇ ಪ್ರತಿವಾದಿ ಶಿವಣ್ಣ ರವರಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ. 3 ನೇ ಪ್ರತಿವಾದಿ ರಾಜಣ್ಣ ರವರಿಗೆ ಇಬ್ಬರು ಗಂಡು ಮಕ್ಕಳು. 4 ನೇ ಪ್ರತಿವಾದಿ ಲಕ್ಷ್ಮಿದೇವಮ್ಮ ನವರಿಗೆ ಇಬ್ಬರು ಹೆಣ್ಣು ಮಕ್ಕಳು. 1 ನೇ ಪ್ರತಿವಾದಿ ನರಸಮ್ಮ ರವರು ಅವರ ಮಕ್ಕಳೊಂದಿಗೆ ಕುಣಿಗಲ್ ನ್ಯಾ ಯಾಲಯದಲ್ಲಿ ಮಾಡಿಕೊಂಡಿರುವ ವಿಭಾಗ ಪತ್ರದ ವಿಚಾರ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ನರಸಮ್ಮ ನವರ ಗಂಡ ಚನ್ನಪ್ಪ ರವರಿಗೆ ಪಿತ್ರಾರ್ಜಿತ ಆಸ್ತಿಗಳಿಗೆ ಸಂಭಂದಿಸಿದಂತೆ ವಿಭಾಗ ಆಗಿದೆ ಎಂದರೆ ಆಸ್ತಿಗಳ ಬಗ್ಗೆ ನನಗೆ ಗೊತ್ತಿಲ್ಲ. ವಾದಿಗಳು ಹಾಕಿರುವ ಸರ್ವೆ ನಂಬರ್ ಗಳ ಚಕ್ಕುಬಂದಿ ನನಗೆ ಗೊತ್ತಿಲ್ಲ. ವಾದಿಗಳು ಹಾಕಿರುವ ಸ್ವತ್ತಿನ ಜಾಗಗಳು ನನಗೆ ಗೊತ್ತಿಲ್ಲ ಎಂದರೆ ಜಾಗಗಳು ಗೊತ್ತಿದೆ. ಪ್ರತಿವಾದಿಗಳು ಯಾವ ಸರ್ವೆ ನಂಬರ್ ಗೆ ತಂತಿ ಬೇಲಿ ಹಾಕಿದ್ದಾರೆಂದರೆ ಜಾಗ ನೋಡಿದ್ದೇನೆ ಆದರೆ ಸರ್ವೆ ನಂಬರ್ ನೋಡಿರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದ ವಿಚಾರಗಳು ಸತ್ಯ ಆದರೆ ನಾನು ಅನಕ್ಷರಸ್ಥ ಆದ ಕಾರಣ ನನಗೆ ಸರ್ವೆ ನಂಬರ್ ಗಳು ನೆನಪಿಲ್ಲ. ನಾನು 2 ನೇ ತರಗತಿಯವರೆಗೆ ಓದಿದ್ದೇನೆ. ದಾವಾ ಆಸ್ತಿಗೆ ಸಂಭಂದಿಸಿದಂತೆ ಆಜುಬಾಜುದಾರರು ನನಗೆ ಗೊತ್ತಿದೆ. ಸಾಕ್ಷಿ ಮುಂದುವರೆದು ವಡ್ಡರಹಟ್ಟಿ ಗ್ರಾಮದಲ್ಲಿ ಒಂದು ಆಸ್ತಿಯ ಪಕ್ಕದಲ್ಲಿ ನಾನು ಇದ್ದೇನೆ, ಮಮ್ತಾಜ್ ರವರು ಇದ್ದಾರೆ, ಉತ್ತರಕ್ಕೆ ಆಪೀಸ್ ಸಾಬ್ ಮತ್ತು ದಕ್ಷಿಣಕ್ಕೆ ನರಸಿಂಹಯ್ಯ ಇದ್ದಾರೆ. ಸದರಿ ಜಮೀನಿನ ಸರ್ವೆ ನಂಬರ್ ನನಗೆ ನೆನಪಿಲ್ಲ. ಸದರಿ ಜಮೀನಿನಲ್ಲಿ ರಾಜಣ್ಣ ಹಾಗೂ ಆತನ ತಂಗಿಯ ಮಗಳು ಸ್ವಾಧೀನದಲ್ಲಿ ಇದ್ದಾರೆ. ಸದರಿ ಜಾಗದ ಜಮೀನಿಗೆ ವಾದಿಗಳು ದಾವೆ ಸಲ್ಲಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನಗೆ ತೆಂಗಿನ ಮರ ಪಾಳ್ಯದ ಆಸ್ತಿಗಳ ಬಗ್ಗೆ ಗೊತ್ತಿಲ್ಲ. ವಾದಿಗಳು ಯಾವ ಸ್ವತ್ತುಗಳಿಗೆ ದಾವೆ

ಸಲ್ಲಿಸಿದ್ದಾರೆಂದರೆ ವಡ್ಡರಹಟ್ಟಿ ಗ್ರಾಮದ ಆಸ್ತಿಗಳ ಬಗ್ಗೆ ಗೊತ್ತು ಮತ್ತು ತೆಂಗಿನ ಮರ ಪಾಳ್ಯದ ಆಸ್ತಿಗಳ ಬಗ್ಗೆ ನನಗೆ ಗೊತ್ತಿಲ್ಲ.

ದಾವಾ ಐಟಂ ನಂ.1 ರಿಂದ 7 ಜಮೀನುಗಳ ವಿವರಗಳನ್ನು ಕೊಡಲು ಸಾಧ್ಯ ಇದೆಯಾ ಎಂದರೆ ಕೊಟ್ಟಿದ್ದೇನೆ. ನನಗೆ ಸದರಿ ಜಮೀನುಗಳ ವಿವರಗಳನ್ನು ಕೊಡಲು ಸಾಧ್ಯ ಇಲ್ಲದೆ ಇದ್ದರು ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿಗಳು ಸಲ್ಲಿಸಿರುವ ಆಸ್ತಿಗಳಲ್ಲಿ ತೆಂಗಿನ ಮರ ಪಾಳ್ಯದ ಜಮೀನು ಪಿತ್ರಾರ್ಜಿತ ಆಸ್ತಿಗಳು ಹಾಗೂ ವಡ್ಡರಹಟ್ಟಿಯಲ್ಲಿ ಇರುವ ಜಮೀನುಗಳು ನರಸಮ್ಮ ನವರ ತಂದೆ ವೆಂಕಟಯ್ಯನವರು ಕೊಟ್ಟಿರುವ ಜಮೀನುಗಳು. ವಡ್ಡರಹಟ್ಟಿ ಮತ್ತು ತೆಂಗಿನ ಮರ ಪಾಳ್ಯದ ಜಮೀನುಗಳನ್ನು ಹೊರತುಪಡಿಸಿ ವಾದಿಗಳಿಗೆ ಇರುವ ಬೇರೆ ಜಮೀನುಗಳ ಮಾಹಿತಿ ನನಗೆ ಇರುವುದಿಲ್ಲ.

ಬೋರಯ್ಯನವರ ಅಣ್ಣ ತಮ್ಮಂದಿರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಚನ್ನಯ್ಯನವರ ಇಬ್ಬರು ಹೆಂಡತಿಯರ ನಡುವೆ ಆಗಿರುವ ವಿಭಾಗ ಪತ್ರ ಆಗಿದ್ದು ನನಗೆ ಇಲ್ಲ ಎಂದರೆ ವಿಭಾಗ ಆಗಿದೆ ಆದರೆ ನನಗೆ ನೆನಪಿಲ್ಲ. ಸುಮಾರು 35 ವರ್ಷಗಳ ಹಿಂದೆ ವಿಭಾಗ ಆಗಿದೆ. ವಾದಿಗಳು ಸಲ್ಲಿಸಿರುವ ಜಮೀನುಗಳಲ್ಲಿ ಇರುವ ಬೆಳೆಗಳ ಮಾಹಿತಿ ನನಗೆ ಇದೆ. ಸದರಿ ಜಮೀನುಗಳಲ್ಲಿ ತೆಂಗು ಮತ್ತು ಅಡಿಕೆ ಗಿಡ ಇದೆ. ಸರ್ವೆ ನಂಬರ್ ನನಗೆ ನೆನಪಿಲ್ಲ. ತೆಂಗಿನ ಮರ ಪಾಳ್ಯದಲ್ಲಿ 1 ರಿಂದ 7 ಸರ್ವೆ ನಂಬರ್ ಗಳಿವೆ, ಕೆಲವುದರಲ್ಲಿ ರಾಗಿ ಬೆಳೆದಿದ್ದಾರೆ ಮತ್ತು ಕೆಲವು ಸರ್ವೆ ನಂಬರ್ ಗಳಲ್ಲಿ ತೋಟ ಮಾಡಿದ್ದಾರೆ. 35 ವರ್ಷಗಳ ಹಿಂದೆ ಆಗಿರುವ ವಿಭಾಗ ಪತ್ರದಂತೆ ಚನ್ನಪ್ಪನವರ ಕುಟುಂಬದವರು ಅವರವರ ಜಮೀನುಗಳ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಸರ್ವೆ ನಂ.102 ನನಗೆ ಗೊತ್ತಿಲ್ಲ. ಸರ್ವೆ ನಂಬರ್ 107 ನನಗೆ ನೆನಪಿಲ್ಲ. ಸಾಕ್ಷಿ ಮುಂದುವರೆದು ಜಮೀನುಗಳು ನನಗೆ ಗೊತ್ತಿದೆ ಆದರೆ ಸರ್ವೆ ನಂಬರ್ ನನಗೆ ನೆನಪಿಲ್ಲ. ತೆಂಗಿನ ಮರ ಪಾಳ್ಯದ ಜಮೀನುಗಳ ಚಕ್ಕುಬಂದಿ ನನಗೆ ಗೊತ್ತಿಲ್ಲ. ತೆಂಗಿನ ಮರ ಪಾಳ್ಯದ ಜಮೀನುಗಳು ರಸ್ತೆಯಿಂದ 1 ಕಿ.ಮೀ ದೂರದಲ್ಲಿ ಇದೆ. ಸದರಿ ರಸ್ತೆ ಹೆಬ್ಬೂರು, ಮಾವಿನಹಳ್ಳಿ, ಹಿಡಗೂರಿನಿಂದ ತೆಂಗಿನ ಮರ ಪಾಳ್ಯದ ರಸ್ತೆ. ಸ್ವತ್ತು ಮತ್ತು ತೆಂಗಿನ ಮರ ಪಾಳ್ಯಕ್ಕೆ ಸುಮಾರು 2 ಕಿ.ಮೀ ಅಂತರ ಇದೆ. ನನಗೆ ದಾವಾ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು ಸಹ ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

Cross Examination: by Counsel for Defendant No.4 :

Counsel called out absent. Hence taken as nil.

**Re examination - Nil**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi